ಇಂದು ದಿಃ **03-06-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ.ಎ.ಎಂ ವಕೀಲರಿಂದ 8 ಮತ್ತು 9 ನೇ ಎದುರುದಾರರ ಪರಃ**

ನಾನು 2006 ರಿಂದ 2021 ರವರೆಗೆ ಸರ್ವೆಯರ್ ಎಂದು ಹರಿಹರದಲ್ಲಿ ಎ.ಡಿ.ಎಲ್.ಆರ್ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ಎ.ಡಿ.ಎಲ್.ಆರ್ ಇವರಿಗೆ Commissioner warrant ಬಂದಿರುತ್ತದೆ. ಎ.ಡಿ.ಎಲ್.ಆರ್ ಕಚೇರಿಯಿಂದ ನಾನು ವಾರೆಂಟ್ ಸ್ವೀಕರಿಸಿದೆನು ಎಂದರೆ ಸರಿ. ಸಾಕ್ಷಿಗೆ ದಿನಾಂಕಃ18-11-2015 ರ ಎ.ಡಿ.ಎಲ್.ಆರ್ ಇವರ ಪತ್ರ ತೋರಿಸಿ, ಇದನ್ನು ನ್ಯಾಯಾಲಯಕ್ಕೆ ಯಾರು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ, ಎ.ಡಿ.ಎಲ್.ಆರ್ ಸಲ್ಲಿಸಿರುತ್ತಾರೆ ಎಂದು ಹೇಳುತ್ತಾರೆ. ಸಾಕ್ಷಿಗೆ ಪೆರಸ್ತಾ (Index) ತೋರಿಸಿ ಅದರಲ್ಲಿ ಅನುಕ್ರಮ ನಂಬರ್ 1 ರಿಂದ 13 ರಲ್ಲಿ Decree copy ಎಂದು ಇದ್ದು, ಸಾಕ್ಷಿಗೆ ಅದನ್ನು ತೋರಿಸಿ, Decree copy ತೋರಿಸಿ ಎಂದು ಕೇಳಲು ಸಾಕ್ಷಿ ನೋಡಿ Decree copy ಇಲ್ಲ ಎಂದು ಹೇಳುತ್ತಾರೆ. ಅದೇ ರೀತಿ warrant copy ಸಹ ಇಲ್ಲ ಎಂದರೆ ಸರಿ. ಪುಟ 16 ಇದು ಖಾಲಿ ಇದೆ ಎಂದರೆ ಸರಿ.

ಸಾಕ್ಷಿಗೆ ಸರ್ವೆ ನಂಬರ್ 15/2 ಮತ್ತು 16/2 ಇವುಗಳ ಮುಟೇಷನ್ ಎಂಟ್ರಿಯನ್ನು ತೋರಿಸಿ ಸದರಿ ಮುಟೇಷನ್ ಎಂಟ್ರಿ ದಿನಾಂಕಃ06-12-2010 ರಂದು ಮಂಜೂರು ಆಗಿರುತ್ತವೆ ಎಂದರೆ ಸರಿ. ಎಂ.ಆರ್ ನಂಬರ್ 10/2010-11 ಇದರ ನಕಲು ಪ್ರತಿಯನ್ನು ನಿ.ಆರ್ 1 ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ಒಂದು ಹಿಸ್ಸಾ ಮೋಜಣಿ ಮತ್ತು ಆಕಾರ್ ಬಂದ್ ನ ದೃ.ನಕಲುಗಳನ್ನು ತೋರಿಸಿ ಸದರಿ ಆಕಾರ್ ಬಂದ್ ಮತ್ತು ಹಿಸ್ಸಾ ಮೋಜಣಿಯಲ್ಲಿ ಎದುರುದಾರರ ನಂಬರ್ 8 ಮತ್ತು 9 ರ ಹೆಸರು ದಾಖಲೆ ಇದೆ ಎಂದರೆ ಸರಿ. ಹಿಸ್ಸಾ ಮೋಜಣಿಯ ದೃ.ನಕಲನ್ನು ನಿ.ಆರ್ -2 ಎಂದು, ಆದಾರ್ ಬಂದ್ ನ ದೃ.ನಕಲನ್ನು ನಿ.ಆರ್ 3 ಎಂದು ಗುರುತಿಸಲಾಯಿತು.

ನಾನು ನ್ಯಾಯಾಲಯದ warrant, Decree copy ಯನ್ನು ಓದಿ

ತಿಳಿದುಕೊಂಡಿರುತ್ತೇನೆ. ಸಾಕ್ಷಿಗೆ ನ್ಯಾಯಾಲಯದ ಕಡತದಲ್ಲಿರುವ ಡಿಕ್ರಿಯ ಪ್ರತಿಯನ್ನು ತೋರಿಸಿ, ಶೆಡ್ಯೂಲ್ ನಲ್ಲಿ ಸರ್ವೆ ನಂಬರ್ 15/2 ಮತ್ತು 16/2 ಎಂದು ನಮೂದು ಇದೆ ಎಂದರೆ ಸರಿ.

ನಾನು ವಾರೆಂಟ್ ಪ್ರಕಾರ ಅನುಕ್ರಮ ನಂಬರ್ 3 ಇದರಲ್ಲಿ ಕಮೀಷನರ್ ವರದಿಯಲ್ಲಿ ಮಹಜರ್ ಎಂದು ನಮೂದಿಸಿದ್ದೇನೆ ಎಂದರೆ ಸರಿ. ಸಾಕ್ಷಿಗೆ ಅವರು ತಯಾರಿಸಿದ ಮಹಜರ್ ತೋರಿಸಿ, ಅದರಲ್ಲಿ ಶೇರಾಪುರ ಗ್ರಾಮದ ಸರ್ವೆ ನಂಬರ್ 15/2 ಮತ್ತು 16/2 ಇವುಗಳ ಪೈಕಿ ಎಂದು ಬರೆದಿದ್ದೇನೆ ಎಂದರೆ ಸರಿ. ನಾನು ಪ್ರಾಥಮಿಕ ಡಿಕ್ರಿಯಲ್ಲಿ ಇರುವ ಸರ್ವೆ ನಂಬರ್ 15/2 ಮತ್ತು 16/2 ಇವುಗಳ ಪೈಕಿ ಇರುವ ಜಮೀನಿನಲ್ಲಿ ಅಳತೆ ಮಾಡಿ ಮಹಜರ್ ಮಾಡಿ ವರದಿ ಸಲ್ಲಿಸಿದ್ದೇನೆ ಎಂದರೆ ಸರಿ. ಸಾಕ್ಷಿಗೆ ಕಮೀಷನರ್ ವರದಿ ಸಲ್ಲಿಸುವ ಸಮಯದಲ್ಲಿ index ನಲ್ಲಿ ನಾನು ಬರೆದಿರುವ ಪುಟ ಸಂಖ್ಯೆ 1 ರಿಂದ 13 ಮತ್ತು 14 ಹಾಗೂ 16 ನ್ನು ನಾನು ಸಲ್ಲಿಸಿಲ್ಲ ಎಂದರೆ ಸಾಕ್ಷಿ ನಾನು ಸಲ್ಲಿಸಿರುತ್ತೇನೆ, ನ್ಯಾಯಾಲಯದಲ್ಲಿ ಸ್ವೀಕರಿಸಿರುತ್ತಾರೆ ಎಂದು ಹೇಳುತ್ತಾರೆ. ಸಾಕ್ಷಿ ಸಾಮಾನ್ಯವಾಗಿ ನಮ್ಮ ಕಚೇರಿಯಿಂದ ಕಮೀಷನರ್ ವರದಿಯನ್ನು ಸಲ್ಲಿಸಬೇಕಾದರೆ ನ್ಯಾಯಾಲಯದ ಸಿಬ್ಬಂದಿ index ಪ್ರಕಾರ ಎಲ್ಲಾ ದಾಖಲೆಗಳನ್ನು ನೋಡಿ ನಂತರ ಸ್ವೀಕರಿಸುತ್ತಾರೆ. ನಂತರದಲ್ಲಿ ಏನಾಗಿದೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 2014 ರ ಪ್ರಕರಣ ಇರುವ ಕಾರಣ ನಾನು ವರದಿ ಸಲ್ಲಿಸಿದ ನಂತರ, ನ್ಯಾಯಾಲಯದಿಂದ ಸ್ವೀಕೃತಿ ಪಡೆದ ಬಗ್ಗೆ ಪತ್ರದ ಪ್ರತಿ ನನ್ನ ಬಳಿ ಈಗ ಇಲ್ಲ. ಎ.ಡಿ.ಎಲ್.ಆರ್ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಒಂದು ವೇಳೆ ಕಚೇರಿಯಲ್ಲಿ ಪತ್ರ ಇದ್ದರೆ ಅದನ್ನು ನೋಡಿ ಹಾಜರುಪಡಿಸುತ್ತೇನೆ. ನಾನು ಮುದ್ದಾಮ್ ನಲ್ಲಿ ಈ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಾನು index ಪ್ರಕಾರ ಇರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಸ್ವತಃ ತಂದು ಹಾಜರುಪಡಿಸಿಲ್ಲ ಎಂದರೆ ಸರಿ.

ನಾನು ಕಮೀಷನರ್ ವರದಿಯಲ್ಲಿರುವ ಚೆಕ್ ಬಂದಿ ಮತ್ತು ಸ್ಕೆಚ್ ಮತ್ತು ತಖ್ತೆಯನ್ನು ನ್ಯಾಯಾಲಯಕ್ಕೆ ಸಲ್ಲಿಸುವ ದಿನಾಂಕದ ಪೂರ್ವದಲ್ಲಿ ನಮ್ಮ

ಎ.ಡಿ.ಎಲ್.ಆರ್ ಕಚೇರಿಯಲ್ಲಿ ಸಂಬಂಧಪಟ್ಟ ಕೇಸು ವರ್ಕರ್ ಗೆ ಕೊಟ್ಟಿರುತ್ತೇನೆ. ಸಾಕ್ಷಿಗೆ ಮಹಜರ್ ಪ್ರಕಾರ ಸರ್ವೆ ನಂಬರ್ 15/2 ಮತ್ತು 16/2 ಇವುಗಳ ಪೈಕಿ ಎಂದು ಇದ್ದು, ಇದರ ಪ್ರಕಾರ ನೀವು ಸ್ಕೆಚ್ ಮತ್ತು ತಖ್ತೆ ತಯಾರಿಸಿದ್ದೀರಾ ಮತ್ತು ಚೆಕ್ ಬಂದಿ ನಮೂದಿಸಿದ್ದೀರಾ ಎಂದರೆ ಸಾಕ್ಷಿ ಪ್ರಾಥಮಿಕ ಡಿಕ್ರಿಯಲ್ಲಿ ಸರ್ವೆ ನಂಬರ್ 15/2 ಮತ್ತು 16/2 ಎಂದು ಇದ್ದು, ಆದರೆ ವಿಸ್ತೀರ್ಣ ಮತ್ತು ಚೆಕ್ ಬಂದಿ ಪೂರ್ಣ ಸರ್ವೆ ನಂಬರ್ 15 ಮತ್ತು 16 ಕ್ಕೆ ಇರುತ್ತದೆ ಎಂದು ಹೇಳುತ್ತಾರೆ. ನಾನು ಸರ್ವೆ ನಂಬರ್ 15/2 ಮತ್ತು 16/2 ಇವುಗಳ ಪೈಕಿ, ಪಾಲು ವಿಭಾಗದ ಆದೇಶದ ಮೇರೆಗೆ ಎಂದು ಇರುವ ಜಮೀನಿನಲ್ಲಿ ಸ್ಕೆಚ್, ಚೆಕ್ ಬಂದಿ ಮತ್ತು ತಖ್ತೆ ತಯಾರು ಮಾಡಿದ್ದೇನೆ. ನಾನು ನ್ಯಾಯಾಲಯದಿಂದ ಬಂದ ವಾರೆಂಟ್ ನ ಅಧಿಕಾರ ವ್ಯಾಪ್ತಿ ಮೀರಿ ಅಳತೆ ಕೆಲಸ ಮಾಡಿದ್ದೇನೆ ಎಂದರೆ ಸರಿಯಲ್ಲ.

Index ನಲ್ಲಿರುವ ಕಮೀಷನರ್ ವಾರೆಂಟ್, ಅನುಕ್ರಮ 13 ರಿಂದ 16 ರ ದಾಖಲೆಗಳು ನ್ಯಾಯಾಲಯದ ಕಡತಗಳಲ್ಲಿ ಪ್ರತ್ಯೇಕವಾಗಿ ಇರುತ್ತವೆ. ಕಮೀಷನರ್ ವರದಿಯಲ್ಲಿ ಪ್ರಾಥಮಿಕ ಡಿಕ್ರಿಯ ಪ್ರಕಾರ ಕಮೀಷನರ್ ಕೆಲಸ ಪೂರೈಸಬೇಕೆಂದು ಇದೆ ಎಂದರೆ ಸರಿ. ಸಾಕ್ಷಿಗೆ ಸರ್ವೆ ನಂಬರ್ 15/1 ರ 2024-25 ರ ಪಹಣಿ ತೋರಿಸಿ ಅದು 17.08 ಗುಂಟೆ ಇದ್ದು, 7 ಜನರ ಹೆಸರಿನಲ್ಲಿ ಇದೆ ಎಂದರೆ ಸರಿ. ಕಾಲಂ ನಂಬರ್ 10 ರಲ್ಲಿ ಎಂ.ಆರ್ ನಂಬರ್ 3/2009-10 ಎಂದು ಇದೆ ಎಂದರೆ ಸರಿ. ಸದರಿ ಪಹಣಿಯನ್ನು ನಿ.ಆರ್-4 ಎಂದು ಗುರುತಿಸಲಾಯಿತು. ಸಾಕ್ಷಿಗೆ ಸರ್ವೆ ನಂಬರ್ 16/1 ರ 2024-25 ರ ಪಹಣಿ ತೋರಿಸಿ, 27.08 ಗುಂಟೆಗೆ 7 ಜನರ ಹೆಸರು ಜಂಟಿಯಾಗಿ ಇದ್ದು, ಎಂ.ಆರ್ ನಂಬರ್ 3/2009-10 ಪ್ರಕಾರ ಎಂದು ಇದೆ ಎಂದರೆ ಸರಿ. ಸದರಿ ಪಹಣಿಯನ್ನು ನಿ.ಆರ್-5 ಎಂದು ಗುರುತಿಸಲಾಯಿತು. ಸಾಕ್ಷಿಗೆ ಸರ್ವೆ ನಂಬರ್ 15/3 ಮತ್ತು 16/3 ಇವುಗಳ ಪಹಣಿ ತೋರಿಸಿ, ಇದರಲ್ಲಿ 33 ಗುಂಟೆ 1 ಎಕರೆ 25 ಗುಂಟೆ ಸೈಯದ್ ಅಹಮ್ಮದ್ ಬಿನ್ ಸೈಯದ್ ಸಾಬ್ಜಾನ್ ಸಾಬ್ ಎಂದು ಇದೆ ಮತ್ತು ಎಂ.ಆರ್ ನಂಬರ್ 9/2010-11 ಕ್ರಯ ಎಂದು ಇದೆ ಎಂದರೆ ಸರಿ. ಸದರಿ ಪಹಣಿಯನ್ನು ನಿ.ಆರ್-6 ಮತ್ತು 7 ಎಂದು ಗುರುತಿಸಲಾಯಿತು. ಅದೇ ರೀತಿ ಸರ್ವೆ ನಂಬರ್ 15/2 ಮತ್ತು 16/2 ಇವುಗಳ 2024-25 ರ ಪಹಣಿಯನ್ನು ತೋರಿಸಿ ಅದರಲ್ಲಿ ಎದುರುದಾರರ 8 ಈತನ

ಹೆಸರು ಎಂ.ಆರ್ ನಂಬರ್ 10/2010-11 ಇದರ ಪ್ರಕಾರ 15.08 ಮತ್ತು 0.30.08 ಗುಂಟೆಗೆ ಮತ್ತು ಎಂ.ಆರ್ ನಂಬರ್ 10/2010-11 ಕ್ರಯದ ಪ್ರಕಾರ ಎಂದು ಇದೆ ಎಂದರೆ ಸರಿ. ಸದರಿ ಪಹಣಿಗಳನ್ನು ನಿ.ಆರ್-8 ಮತ್ತು 9 ಎಂದು ಗುರುತಿಸಲಾಯಿತು. ಈ ಪಹಣಿಗಳು ನಿ.ಆರ್-1 ಮುಟೇಷನ್ ಗೆ ಅನ್ವಯ ಆಗುವಂತೆ ಇವೆ ಎಂದರೆ ಸರಿ. ಸರ್ವೆ ನಂಬರ್-15/2, 16/2, ಇವುಗಳ ಪಹಣಿ, ಹಿಸ್ಸಾ ಟಿಪ್ಪಣಿ, ಮುಟೇಷನ್ ಎಂಟ್ರಿ, ಆಕಾರ್ ಬಂದ್ ಮೇಲೆ ಹೇಳಿದ ದಾಖಲೆಗಳ ಪ್ರಕಾರ ಒಂದಕ್ಕೊಂದು ತಾಳೆ ಆಗುತ್ತವೆ ಎಂದರೆ ಸರಿ. ವಾದಿಗಳು ಪ್ರಾಥಮಿಕ ಡಿಕ್ರಿಯ ಪ್ರಕಾರ ಸರ್ವೆ ನಂಬರ್ 15/2 ಮತ್ತು 16/2 ಇವುಗಳ ಪಹಣಿ, ಮುಟೇಷನ್, ಹಿಸ್ಸಾ ಟಿಪ್ಪಣಿ, ಆಕಾರ್ ಬಂದ್ ಕಮೀಷನರ್ ಕೆಲಸದ ಸಮಯದಲ್ಲಿ ಕೊಟ್ಟಿರುವುದಿಲ್ಲ, ಸಾಕ್ಷಿ ನ್ಯಾಯಾಲಯದಿಂದ ದಾಖಲಾತಿಗಳು ಬಂದಿರುತ್ತವೆ ಎಂದು ಹೇಳುತ್ತಾರೆ. ನ್ಯಾಯಾಲಯದಿಂದ ವಾರೆಂಟ್ ಮತ್ತು ಡಿಕ್ರಿ ಕಾಪಿ ಬಂದಿರುತ್ತದೆ. ಸರ್ವೆ ನಂಬರ್ 15/2 ಮತ್ತು 16/2 ಗೆ ಸಂಬಂಧಿಸಿದಂತೆ ಭೂ ದಾಖಲೆಗಳನ್ನು ಕಮೀಷನರ್ ಕೆಲಸ ಪೂರೈಸಲು ನಾನು ನನ್ನ ಕಚೇರಿಯಿಂದ ಪಡೆದುಕೊಂಡಿದ್ದೆನು. ಸರ್ವೆ ನಂಬರ್ 15/1, 16/1, 15/3 ಮತ್ತು 16/3 ಇವುಗಳ ದಾಖಲೆಗಳನ್ನು ನಾನು ಕೆಲಸ ಪೂರೈಸುವ ಮೊದಲು ನಮ್ಮ ಕಚೇರಿಯಿಂದ ಪಡೆದುಕೊಂಡಿದ್ದೆನು. ಈ ಎಲ್ಲಾ ಜಮೀನುಗಳಿಗೆ ಪ್ರತ್ಯೇಕ ಚಕ್ ಬಂದಿ ಇರುತ್ತದೆ ಎಂದರೆ ಸಾಕ್ಷಿ ನಮ್ಮ ದಾಖಲೆಗಳಲ್ಲಿ ಚಕ್ ಬಂದಿ ನಮೂದಿಸುವುದಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂಬರ್ 15/1, 15/2, 15/3 ಇವುಗಳ ಚಕ್ ಬಂದಿಗಳನ್ನು ನಾನು ಅಳತೆ ಕೆಲಸದ ಪೂರ್ವದಲ್ಲಿ ಪರಿಶೀಲಿಸಿಲ್ಲ ಎಂದರೆ ಸರಿ. ಸರ್ವೆ ನಂಬರ್ 16/1, 16/2, 16/3 ಇವುಗಳ ಚಕ್ ಬಂದಿಗಳನ್ನು ನಾನು ಅಳತೆ ಕೆಲಸದ ಪೂರ್ವದಲ್ಲಿ ಪರಿಶೀಲಿಸಿಲ್ಲ ಎಂದರೆ ಸರಿ. ನಾನು ಸರ್ವೆ ನಂಬರ್ 15/1, 15/2, 15/3, 16/1, 16/2, 16/3 ಇವುಗಳ ಅಳತೆ ಮತ್ತು ಚಕ್ ಬಂದಿ ಪ್ರಕಾರ ಕಮೀಷನರ್ ಕೆಲಸ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ನ್ಯಾಯಾಲಯದಿಂದ ಬಂದ ಡಿಕ್ರಿಯ ಸರ್ವೆ ನಂಬರ್ ಮತ್ತು ಚಕ್ ಬಂದಿ ಪ್ರಕಾರ ಮಾಡಿದ್ದೇನೆ ಎಂದು ಹೇಳುತ್ತಾರೆ.

ಸಾಕ್ಷಿಗೆ ನ್ಯಾಯಾಲಯಕ್ಕೆ ಅವರು ಸಲ್ಲಿಸಿದ ಕಮೀಷನರ್ ಸ್ಕೆಚ್ ತೋರಿಸಿ ಅವುಗಳಲ್ಲಿ ಅವುಗಳನ್ನು ತಯಾರು ಮಾಡಿದ ತಾರೀಖು ನಮೂದು ಮಾಡಿಲ್ಲ

ಎಂದರೆ ಸರಿ. ಅದೇ ರೀತಿ ಪುಟ ನಂಬರ್ 18, 19 ಮತ್ತು 20 ರಿಂದ 24 ರ ಪುಟಗಳಲ್ಲಿ ತಾರೀಖು ನಮೂದು ಇಲ್ಲ ಎಂದರೆ ಸರಿ. ಅದೇ ರೀತಿ ಹಾಜರು ಇದ್ದ ವಾದಿಗಳ ಸಹಿ ಇಲ್ಲ ಎಂದರೆ ಸರಿ, ಸಾಕ್ಷಿ ಮಹಜರ್ ನಲ್ಲಿ ಪಡೆಯುತ್ತೇವೆ ಎಂದು ಹೇಳುತ್ತಾರೆ. ನಾನು ಈ ಸರ್ವೆ ಸ್ಕೆಚ್ ಗಳಲ್ಲಿ, ಸರ್ವೆ ನಂಬರ್ ಗಳನ್ನು 15 ಮತ್ತು 16 ಎಂದು ನಮೂದಿಸಿದ್ದೇನೆ. ನಾನು ಈ ಕಮೀಷನರ್ ಸ್ಕೆಚ್ ಗಳನ್ನು ವಾರೆಂಟ್ ಪ್ರಕಾರ ತಯಾರು ಮಾಡಿಲ್ಲ ಎಂದರೆ ಸರಿಯಲ್ಲ. ಬೇರೆ ಯಾವುದೋ ಉದ್ದೇಶಕ್ಕೆ ತಯಾರು ಮಾಡಿ ಇಟ್ಟಿದ್ದ ಹಿಂದಿನ ಸ್ಕೆಚ್ ಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವಾರೆಂಟ್ ನಲ್ಲಿ ಸರ್ವೆ ನಂಬರ್ 15 ಮತ್ತು 16 ಎಂದು ಇಲ್ಲ, ನಾನು ಸ್ಕೆಚ್ ಗಳನ್ನು ತಯಾರು ಮಾಡಿದ ದಿನಾಂಕ ನಮೂದು ಇಲ್ಲ ಮತ್ತು ನನಗೆ ಬೇಕಾದ ರೀತಿಯಲ್ಲಿ ವರದಿ ತಯಾರು ಮಾಡಿ ಖೊಟ್ಟಿ ದಾಖಲೆಗಳನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಡಿಕ್ರಿಯ ಅನುಗುಣವಾಗಿ ಮತ್ತು ಚಕ್ ಬಂದಿಗಳಿಗೆ ಅನುಗುಣವಾಗಿ ನನ್ನ ವರದಿಯನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ವರದಿಯನ್ನು ಸರಿಯಾಗಿ ಸಲ್ಲಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಮೀಷನರ್ index ಗೆ ನನ್ನ ಸಹಿ ಮತ್ತು ದಿನಾಂಕ ಇಲ್ಲ ಎಂದರೆ ಸರಿ. ಯಾವತ್ತು ಸಲ್ಲಿಸಿದ್ದೇನೆ ಎಂದು ಗೊತ್ತಿಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.